# ಕುವೆಂಪು ಕಾವ್ಯದಲ್ಲಿ ನಾಡು–ನುಡಿ ಪ್ರೇಮ

# Kuvempu Kavyadalli Nadu Nudi Prema

**Dr. K Anjanappa**
Associate Professor,
Dept of Kannada,
Tunga Mahavidyalaya,
Thirthahalli, Shivamogga Dist.,
Karnataka State.

ಪ್ರಪಂಚದಾದ್ಯಂತ ಸಹಸ್ರಾರು ಭಾಷೆಗಳು ಚಲಾವಣೆಯಲ್ಲಿದ್ದು ಬ್ರಿಟಿಷ್ ಇಂಡಿಯಾ ವಸಾಹತುಶಾಹಿ ಭಾರತವೊಂದರಲ್ಲೆ 6000ಕ್ಕೂ ಮಿಕ್ಕ ಭಾಷೆಗಳಿದ್ದವೆಂದು ಹೇಳಲಾಗಿದೆ. ಬ್ರಿಟಿಷ್ ಪೂರ್ವ ಭಾರತದಲ್ಲಿ ಸಾವಿರಾರು ಭಾಷೆಗಳಿದ್ದು, ಅವು ಪ್ರಾಂತೀಯ ವ್ಯಾಪ್ತಿ ಸ್ವರೂಪದ 'ದೇಶಭಾಷೆ' ಗಳಾಗಿದ್ದವು ಮತ್ತು ಅವು ಬೇರೆ ಬೇರೆ ಸಂಸ್ಕೃತಿಗಳ ಪ್ರತಿನಿಧಿಗಳೂ ಕೂಡ ಆಗಿದ್ದವು. ಇಷ್ಟು ದೇಶ ಭಾಷೆಗಳ ಮಧ್ಯೆ ಭಾರತಖಂಡಕ್ಕೆ ಅನ್ವಯಿಸುವಂತೆ–ಬ್ರಿಟಿಷರು ಬರುವ ಮುಂಚೆ ನಮಗೆ 'ಭಾರತ ರಾಷ್ಟ್ರ'ದ ಪರಿಕಲ್ಪನೆ ಇತ್ತೇ ಎಂಬುದು ಚರ್ಚಾರ್ಹವಾದ ವಿಷಯ. ಇದನ್ನು ಮುಂದೆ ಗಮನಿಸಲಾಗಿದೆ. ಗೀರ್ವಾಣ ಭಾಷೆಯಾದ 'ಸಂಸ್ಕೃತ' ಪ್ರಾಂತ್ಯಾಂತರ ವ್ಯಾಪ್ತಿಯ 'ವಿಶ್ವಾತ್ಮಕವಾದ' ಭಾಷೆಯಾಗಿತ್ತು. 'ಈ ದೇಶ ಭಾಷೆಗಳು' ಹಾಗೂ 'ವಿಶ್ವಾತ್ಮಕ, ಭಾಷೆಗಳ ನಡುವೆ ಕೊಡು ಕೊಳೆಗಳು ನಡೆಯುತ್ತಿದ್ದವು. ಆದರೂ ಕೂಡ ಪ್ರಾಂತ್ಯಾಂತರ ವ್ಯಾಪ್ತಿಯ ಸಂಸ್ಕೃತ ಭಾಷೆಯ ಸಾಹಿತ್ಯಿಕ ಮಾನದಂಡಗಳನ್ನು ದೇಶ ಭಾಷೆಗಳು ಒಳಗೊಳ್ಳುತ್ತಿದ್ದವು. ಆ ಮುಖೇನ 'ವಿಶ್ವಾತ್ಮಕತೆ' ಯನ್ನು 'ಸ್ಥಳೀಯತೆ'ಯಲ್ಲಿ ಕಂಡುಕೊಳ್ಳುತ್ತಿದ್ದವು.

ವಾಣಿಜ್ಯೋದ್ದೇಶದಿಂದ ಬಂದ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ, 1757ರ ಪ್ಲಾಸಿ ಕದನಾ ನಂತರ ಒಂದು ಶತಮಾನದ ಅವಧಿಯಲ್ಲಿ ಇಂಡಿಯಾವನ್ನು ತಮ್ಮ ಹಿಡಿತದಲ್ಲಿಟ್ಟುಕೊಳ್ಳುವಲ್ಲಿ ಶಕ್ತವಾಯಿತು. ಬ್ರಿಟಿಷರು ಇಂಡಿಯಾಕ್ಕೆ ಬಂದು ಇಲ್ಲಿ ಅಧಿಕಾರವನ್ನು ಹಿಡಿದುಕೊಂಡ ಸಮಯ. ಆಧುನಿಕ ಭಾರತೀಯ ಸಾಂಸ್ಕೃತಿಕ ಸಂದರ್ಭದಲ್ಲಿ ಬಹುಮುಖ್ಯವಾದ ಘಟ್ಟ.

ಬ್ರಿಟಿಷ್ ವಸಾಹತುಶಾಹಿ ಭಾರತದ ಮೇಲೆ ಮುಖ್ಯವಾಗಿ ತನ್ನ ಛಾಪನ್ನು ಒತ್ತಿದ್ದು ತನ್ನ ಶಿಕ್ಷಣ ಕ್ರಮದ ಮೂಲಕ. ಬ್ರಿಟಿಷರು ಇಲ್ಲಿನ 'ಕೂಲಿಮಠ' ಐಗಳ ಮಠ, ಅಗ್ರಹಾರ, ಬ್ರಹ್ಮಸ್ಥಾನ, ದೇವಸ್ಥಾನ, ಘಟಿಕಾಸ್ಥಾನಗಳಂತಹ ಗುರುಕುಲ ಪ್ರೇರಿತ ಸಾಂಪ್ರದಾಯಿಕ ಶಿಕ್ಷಣ ಪದ್ಧತಿಗೆ ಪರ್ಯಾಯವಾಗಿ ದೇಶಾದ್ಯಂತ ಮೆಕಾಲೆ ಪ್ರಣೀತ 'ಇಂಗ್ಲಿಷ್ ಶಾಲೆ'ಗಳನ್ನು ಪ್ರಾರಂಭಿಸಿತು. ಜಾತ್ಯಾತೀತ ಸ್ವರೂಪವುಳ್ಳ ಈ ಏಕರೂಪದ ಶಿಕ್ಷಣ ಪದ್ಧತಿಯಲ್ಲಿ ಎಲ್ಲರಿಗೂ ಮುಕ್ತವಾದ ಅವಕಾಶವಿದ್ದಿತು. ಹೊಸ ಶಿಕ್ಷಣ ಪದ್ಧತಿ ಅಥವಾ ಇಂಗ್ಲಿಷಿನ ಜ್ಞಾನ ಇಲ್ಲಿನ ಜನತೆಯಲ್ಲಿ ಅರಿವಿನ ಸ್ಫೋಟವನ್ನೇ ಉಂಟುಮಾಡಿತು. ಜಗತ್ತಿನಲ್ಲಿ ನಡೆಯುತ್ತಿದ್ದ ವಿದ್ಯಮಾನಗಳಿಗೆ ಇಲ್ಲಿನ ಜನರು ಸ್ಪಂದಿಸತೊಡಗಿದರು. ಆದರೆ ಬ್ರಿಟಿಷರು ಇಲ್ಲಿನ ಜನತೆಗೆ ಏಕರೂಪದ ಇಂಗ್ಲಿಷ್ ಶಿಕ್ಷಣ ನೀಡುವ ಅವರ ಉದ್ದೇಶ ಅಷ್ಟು ಸಾಧುವಾದದ್ದೇನಾಗಿರಲಿಲ್ಲ. ಬ್ರಿಟಿಷ್ ವಸಾಹತು ಶಿಕ್ಷಣದ ಬಹುಮುಖ್ಯ ದ್ವಂದ್ವಾತ್ಮಕ ಸಮಸ್ಯೆಯಿರುವುದೇ ಇಲ್ಲಿ. ಯಾವುದೇ 'ಸಾಮ್ರಾಜ್ಯದ' ಚಕ್ರಾಧಿಪತ್ಯ ಕಟ್ಟಬೇಕಾದರೆ, ಏಕರೂಪದ ಧರ್ಮ ಇರಬೇಕು. ಏಕರೂಪದ ಆಚರಣಾ ವ್ಯವಸ್ಥೆ ಇರಬೇಕು. ಈ ಕಾರಣದಿಂದಲೇ ಎಲ್ಲಾ ಸಾಮ್ರಾಜ್ಯಗಳೂ ಅವು ಯಾವುದೇ ಸಿದ್ಧಾಂತಕ್ಕೆ ಸೇರಿದವುಗಳಾಗಿರಲಿ ಬಲಾತ್ಕಾರವಾಗಿಯಾದರೂ ಬದುಕಿನ ಎಲ್ಲಾ ಕ್ಷೇತ್ರಗಳಲ್ಲಿ ಏಕರೂಪತೆಯನ್ನು ತರಲೆತ್ನಿಸುತ್ತವೆ. ಆದ್ದರಿಂದಲೇ ಬ್ರಿಟಿಷರು ಉದ್ದೇಶ ಪೂರ್ವಕವಾಗಿ ಏಕರೂಪದ ಇಂಗ್ಲಿಷ್ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಿದರು.

ಸಾಮ್ರಾಜ್ಯಶಾಹಿ ರಾಷ್ಟ್ರವೊಂದು ಯಾವಾಗಲೂ ಸೈನ್ಯದೊಂದಿಗೆ, ಸಂಸ್ಕೃತಿಯನ್ನು ಕೂಡ, ಅಧೀನ ರಾಷ್ಟ್ರವನ್ನು ತನ್ನ ನಿಯಂತ್ರಣದಲ್ಲಿಟ್ಟುಕೊಳ್ಳುವ ಸಾಧನವನ್ನಾಗಿ ಬಳಸಿಕೊಳ್ಳುತ್ತದೆ. ಯಜಮಾನಿಕ ಭಾಷೆಯ ಮುಖೇನ ಪ್ರಚುರಗೊಳ್ಳುವ ಸಂಸ್ಕೃತಿಯು ಯಾಟತ್ತೂ ವಸಾಹತುಶಾದಿ ರಾಷ್ಟ್ರಗಳಿಗೆ 'ಮೇಲರಿಮೆಯ ಮಾದರಿ'ಗಳಾಗಿ ಕಾಣಿಸುವಂತೆ ಮಾಡಲಾಗುತ್ತದೆ. ಯಜಮಾನ ವರ್ಗದ ಭಾಷೆಯನ್ನು ಸ್ವೀಕರಿಸಿ ಕಲಿಯುವುದರಿಂದ ದೊರೆಯುವ ಸಾಮಾಜಿಕ ಆರ್ಥಿಕ ಮೇಲ್ಚಲನೆಯೂ ಕೂಡ ಇದಕ್ಕೆ ಪೂರಕವಾಗಿಯೇ ಇರುತ್ತದೆ. ಅಧೀನ ರಾಷ್ಟ್ರ, ಒಡೆತನ ರಾಷ್ಟ್ರದ ಸೌಂದರ್ಯ ಮೀಮಾಂಸೆಯನ್ನು ಶ್ರೇಷ್ಠವೆಂದು ಪರಿಭಾವಿಸುವುದು ಇಂತಹ ಸಂದರ್ಭಗಳಲ್ಲೇ. ಹೀಗೆ ಬ್ರಿಟಿಷ್ ಯಜಮಾನ್ಯವು ತನ್ನ ಭಾಷೆ, ಸಂಸ್ಕೃತಿಯ ಮುಖೇನ, ಅಧೀನ ವಸಾಹತು ಕಾಲೋನಿ ಇಂಡಿಯಾದ ಜನರಿಗೆ ಅವರ ಭಾಷೆ, ಕಲೆ, ಸಂಸ್ಕೃತಿಗಳ ಬಗೆಗೆ ಈ ತರತಮಗಳ ಮೂಲಕ ಕೀಳರಿಮೆ ಮಾಡುವ ಮೂಲಕ ಬ್ರಿಟಿಷ್ ಪ್ರಭುತ್ವವು ಅವರ ಉದ್ದಾರಕ್ಕೆ–ಏಳಿಗೆಗೆ ಬಂದಿರುವ ಪ್ರವಾದಿ ಯೋಪಾದಿಯಲ್ಲಿ ಕಾಡುವಂತೆ ಮಾಡುತ್ತದೆ. ದೇಶಾದ್ಯಂತ ಏಕರೂಪಿ ಶಿಕ್ಷಣ ಪದ್ಧತಿಯ ಹಿಂದೆ ಇದ್ದ ಬ್ರಿಟಿಷ್ ವಸಾಹತುಶಾಹಿಯ ಒಳ ಹುನ್ನಾರವಿದು.

ಹೊಸ ಏಕರೂಪಿ ಇಂಗ್ಲಿಷ್ ಶಿಕ್ಷಣದಿಂದ ಬ್ರಿಟಿಷ್ ಆಡಳಿತ ಯಂತ್ರವನ್ನು ನಡೆಸಲು ಬೇಕಾದ 'ಗುಮಾಸ್ತರ ಪಡೆ'ಯನ್ನು ನಿರ್ಮಿಸುವುದು ಕೂಡ ಈ ಶಿಕ್ಷಣ ಪದ್ಧತಿಯ ಹಿನ್ನಲೆಗಿತ್ತು. ಈ 'ಗುಮಾಸ್ತರ ಪಡೆ'ಯೊಂದಿಗೆ ಈ ಶಿಕ್ಷಣದ ಪದ್ಧತಿಯಿಂದಾಗಿ 'ಸುಶಿಕ್ಷಿತ ಮಧ್ಯಮ ವರ್ಗದ' ಉದಯ ಭಾರತದಲ್ಲಾಯಿತು. ಹೊಸ ಶಿಕ್ಷಣ ಪಡೆದಿದ್ದ ಮಧ್ಮಮ ವರ್ಗ ಎಲ್ಲವನ್ನೂ ಪ್ರಶ್ನಿಸುವ, ಸರಿಯೆನಿಸಿರುವುದನ್ನು ಒಪ್ಪುವ ವಿಚಿಕಿತ್ಸಕ ಮನೋಧರ್ಮದವರಾಗಿದ್ದರು. ಜೊತೆಗೆ ಪರಂಪರೆಯನ್ನು ವಿಮರ್ಶಿಸುವ, ಲೌಕಿಕ ಹಾಗೂ ವ್ಯಕ್ತಿ ಕೇಂದ್ರಿತ ಸ್ವನಿಷ್ಠ ಮನೋಭಾವವನ್ನು ಅವರು ಹೊಂದಿದವರಾಗಿದ್ದಾರೆ. ಈ ನವ ಸುಶಿಕ್ಷಿತ ಮಧ್ಮಮ ವರ್ಗದಲ್ಲೇ ಎರಡು ವಿಭಿನ್ನ ಮನೋಧರ್ಮದವರಿದ್ದರು. ಒಂದು ವರ್ಗದವರಲ್ಲಿ 'ಭಾರತದಲ್ಲಿ ಹೊಸದಾಗಿ ಬಂದ ಬೂರ್ಷ್ವಾ ಸಾಹಿತ್ಯ ಮತ್ತು ಸಂಸ್ಕೃತಿಯ ಹಿಂದೆ ವಿದೇಶಗಳಲ್ಲಿ ಅಧ್ಯಯನ ಮಾಡಿದ ಬುದ್ಧಿ ಜೀವಿಗಳೇ ಮುಖ್ಯರಾಗಿದ್ದರು. ಆದ್ದರಿಂದ ಅವರು "ಭಾರತೀಯ"ವಾದದ್ದರ ಬಗೆಗೆ ನಿಂದಿಸುವುದರಲ್ಲಿ ಹೆಚ್ಚು ಆಸಕ್ತಿ ವಹಿಸುತ್ತಿದ್ದರು. ಮತ್ತೊಂದು ವರ್ಗ ಪ್ರಾಚ್ಯ ಮತ್ತು ಪಶ್ಚಿಮಾತ್ಯ ಬೌದ್ಧಿಕ ವಿಚಾರಧಾರೆಗಳನ್ನು ಸಮನ್ವಯಗೊಳಿಸಿಕೊಂಡು ಅವುಗಳ ಎಚ್ಚರದಲ್ಲಿ ಒಂದು ಹೊಸ ರೀತಿಯ ಉದಾರ 'ಮಾನವತಾವಾದಿ' ಚಿಂತನೆಗಳನ್ನು ಹೊಂದಿದ್ದರು. ಇದು ಅವರಿಗೆ ಇಂಗ್ಲಿಷ್ ಕ್ರಿಶ್ಚಿಯನ್ ಪ್ರಣೀತ ಶಿಕ್ಷಣದ ಫಲದಿಂದ ಬಂದುದಾಗಿದ್ದಿತು. ಇವರು ಬ್ರಿಟಿಷ್ ಆಡಳಿತವನ್ನು ಭಾರತದ ಜಾತ್ಯನೈಕ್ಯತೆಯನ್ನು, ಮೂಢನಂಬಿಕೆಗಳನ್ನು, ಬಹು ದೇವತಾರಾಧನೆಗಳನ್ನು ವಿಗ್ರಹಾರಾಧನೆಗಳನ್ನು ಕೊನೆಗೊಳಿಸುವ ಮಾರ್ಗವಾಗಿ ಕಂಡಿತು. ಆದುದರಿಂದ ಇವರು 'ಸುಧಾರಣ ವಾದ'ದ ಹಿನ್ನೆಲೆಯಲ್ಲಿ ಅಂದರೆ 'ಭಾರತೀಯ ಪುನರುತ್ಥಾನದ' ಹಿನ್ನೆಲೆಯಲ್ಲಿ ಬ್ರಿಟಿಷರನ್ನು ಮೊದಲಿಗೆ ಬೆಂಬಲಿಸತೊಡಗಿದರು. ಬ್ರಿಟಿಷ್ ವಸಾಹತುಶಾಹಿಯ ಸಾಂಸ್ಕೃತಿಕ ಯಜಮಾನ್ಯದಿಂದ ದತ್ತವಾದ ಬ್ರಿಟಿಷ್ ಸಂಸ್ಕೃತಿ, ಭಾಷೆ ಮುಂತಾದವುಗಳ ಮೂಲಕ ಲಭಿಸಿದ ತಿಳಿವಳಿಕೆಯ ಆಕೃತಿಗಳು ಜೊತೆಗೆ ಅಧೀನ ವಸಾಹತುವಾದ ಇಂಡಿಯಾದ ತನ್ನ ಪರಂಪರಾತ್ಮಕ ದೇಶೀಯ ಸಂಸ್ಕೃತಿಯ ತಿಳಿವಳಿಕೆ ಇವೆರಡರ ಅನುಸಂಧಾನದ ಮೂಲಕ ತನ್ನದೇ ಆದ ಬಿಡುಗಡೆಯ ಮಾದರಿಯನ್ನು ಕಂಡುಕೊಂಡಿತು.

ಈ ಶಿಕ್ಷಣ ವ್ಯವಸ್ಥೆಯಿಂದಾದ ಒಂದು ಅನುಕೂಲವೆಂದರೆ ಶೂದ್ರ ಹಾಗೂ ಅದರಲ್ಲೂ ಅತಿ ಮುಖ್ಯವಾಗಿ ಅತಿ ಶೂದ್ರರಾದ ಪಂಚಮರಿಗೆ ಶಿಕ್ಷಣದ ಅವಕಾಶ ದೊರೆತದ್ದು. ವಸಾಹತುಶಾಹಿ ಭಾರತದಲ್ಲಿ ಜಾತ್ಯಾತೀತ ನೆಲೆಯ ಏಕರೂಪ ಶಿಕ್ಷಣ ಪದ್ಧತಿ ಜಾರಿಗೆ ಬಂದಿತೆಂದು ಸಾಮಾನ್ಯ ನಂಬಿಕೆ. ಆದರೆ ವಸಾಹತು ಪೂರ್ವದ ದೇಶಿ ಶಿಕ್ಷಣ ಪದ್ಧತಿಯಲ್ಲಿ ಶೂದ್ರ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತಾರೆ ಎಂಬ ಅಚ್ಚರಿಯ ಸಂಗತಿಯೊಂದನ್ನು ಡಿ. ಆರ್. ನಾಗರಾಜ್ ಉಲ್ಲೇಖಿಸುತ್ತಾರೆ. (ಉಲ್ಲೇಖ : ಮೆಕಾಲೆ ಮಕ್ಕಳು ಪು. 75). ಆದರೆ ವಸಾಹತು ಪೂರ್ವಸ್ಥಿತಿಯಿಂದಲೂ ಅಸ್ಪೃಶ್ಯರ ಸ್ಥಿತಿ ತೋಚನೀಯವಾದದ್ದೇ ಆಗಿದ್ದಿತು. ಬ್ರಿಟಿಷ್ ಶಿಕ್ಷಣ ಪದ್ಧತಿಯಿಂದಾಗಿ ಅವರಲ್ಲಿ ಹೊಸ ಅರಿವಿನ ಬೆಳಕು, ತಮ್ಮ ಬಿಡುಗಡೆಯ ಆಕಾಂಕ್ಷೆಯಾಗಿ ತುಡಿಯತೊಡಗಿತು.

ಇಂಗ್ಲಿಷ್ ಭಾಷೆಯ ಅರಿವಿನ ಬೆಳಕಿನಲ್ಲಿ ಶೂದ್ರ, ಪಂಚಮರು ತಮ್ಮ ಅಸ್ತಿತ್ವವನ್ನು ಹುಡುಕ ತೊಡಗಿದರು. ಈ ಅರಿವಿನ ಪ್ರತಿರೂಪವಾಗಿ ನಾವಿಂದು ಕುಪ್ಪಳ್ಳಿ ಪುಟ್ಟಪ್ಪನವರನ್ನು ಬಾಬಾ ಸಾಹೇಬ್ ಅಂಬೇಡ್ಕರ್ ಅವರನ್ನು ಕಾಣುತ್ತಿದ್ದೇವೆ. ವಸಾಹತುಶಾಹಿಯಿಂದ ಇಂಡಿಯಾದ ಮಾನಸದಲ್ಲಿ ಮೂಡಿದ ಮತ್ತೊಂದು ಮುಖ್ಯ ಕಲ್ಪನೆ 'ರಾಷ್ಟ್ರೀಯತಾ ಪ್ರಜ್ಞೆ'. ಈ 'ರಾಷ್ಟ್ರ'ತ್ವದ ಕಲ್ಪನೆ ಮುಖ್ಯವಾಗಿ ಬುದ್ಧಿ ಮೂಲವಾದದ್ದಲ್ಲ. ಅದು ಭಾವನಾವಲಂಬಿಯಾದುದು. ಅದು ಒಂದು 'ರಾಷ್ಟ್ರ'ವೆಂದು ಕಲ್ಪಿಸಿಕೊಳ್ಳಲಾದ ಜನತೆಯ ಮನಸ್ಸಿಗೆ ಸಂಬಂಧಿಸಿದುದು. ಹಾಗೆ ನೋಡಿದರೆ ಈ ರಾಷ್ಟ್ರೀಯ ಕಲ್ಪನೆ ವಸಾಹತು ಭಾರತಕ್ಕೆ ಹೊಸದೇನಾಗಿರಲಿಲ್ಲ. ಸಂಸ್ಕೃತಿಯಾಗಿ 'ಭರತಖಂಡದ' ಕಲ್ಪನೆಯೆ. ಭಾರತ ಪರಂಪರೆಯ ಸ್ಮೃತಿಯಾಗಿತ್ತು. ವಸಾಹತುಶಾಹಿಯು ರಾಷ್ಟ್ರಾದ್ಯಂತ ಒಂದು ಕೇಂದ್ರೀಕೃತ ಸರ್ಕಾರ, ರಕ್ಷಣಾ ವ್ಯವಸ್ಥೆ, ವಿದೇಶಾಂಗನೀತಿ, ಕಾನೂನು ಸಂಹಿತೆಗಳು ಮೊದಲಾಗಿ ದೇಶವ್ಯಾಪಿ ಸಾರಿಗೆ ಸಂಪರ್ಕ, ಅಂಚೆ ಮತ್ತು ತಂತಿ ಸಂಪರ್ಕವನ್ನು ಸಾಧಿಸುವ ಮುಖೇನ 'ಭಾರತ ರಾಷ್ಟ್ರತ್ವ'ದ ಒಂದು ಸಾಂದ್ರವಾದ ಪರಿಕಲ್ಪನೆಗೆ ಕಾರಣವಾಯಿತು.

ವಸಾಹತುಶಾಹಿ ವ್ಯವಸ್ಥೆಯಿಂದ ಭಾರತದ ಮೇಲಾದ ಆಘಘಾತವೆಂದರೆ ದೇಶಿ ಪರಂಪರಾಗತ ಸಂಸ್ಕೃತಿ, ಜ್ಞಾನ ಶಿಸ್ತುಗಳ 'ಮರೆವ'ನ್ನು ಅನುಭವಿಸಿದುದು. ಅಂದರೆ ಶ್ರಮಾಧಾರಿತ ವಿಭಜನೆ ಹೊಂದಿದ್ದ ಪ್ರತ್ಯೇಕ ಜಾತಿಗಳು ತಮ್ಮ ಪರಂಪರಾಗತ ಕುಲಕಸುಬುಗಳ ಬಗೆಗಿನ ಜ್ಞಾನ ಮಾದರಿಗಳು ವಿಸ್ಮೃತಿಗೆ ತಳ್ಳಲ್ಪಟ್ಟವು. ಈ ಕಾರಣದಿಂದಾಗಿ ಜನರು ಉದ್ಯೋಗಕ್ಕೆ ಸರ್ಕಾರವನ್ನು ಆಶ್ರಯಿಸುವಂತಾಯಿತು. ಇದರಿಂದ ಬ್ರಿಟಿಷ್ ಸರ್ಕಾರದ ಬೆಂಬಲವನ್ನು ಕೋರುವಂತಾಯಿತು. ಗಾಂಧೀಜಿ ತಮ್ಮ ಅಹಿಂಸಾತ್ಮಕ ಸತ್ಯಾಗ್ರಹ ಹೋರಾಟದಲ್ಲಿ ಖಾದಿಯನ್ನು ಉತ್ಪಾದಿಸುವ ಚರಕಕ್ಕೆ ನೀಡಿದ ಪ್ರಾಮುಖ್ಯತೆ, ಹಾಗೂ ಬ್ರಿಟಿಷರ ವಿರುದ್ಧ ಜನತೆಯನ್ನು ಪ್ರತಿರೋಧಾತ್ಮಕವಾಗಿ ಒಟ್ಟುಗೂಡಿಸುವ ರಾಷ್ಟ್ರೀಯತೆಯ ರೂಪಕವೂ ಆಯಿತು.

ವಸಾಹತುಶಾಹಿ ಭಾರತ, ಬ್ರಿಟಿಷ್ ಸಂಸ್ಕೃತಿಯ ಆಕ್ರಮಣದಿಂದಾಗಿ ತನ್ನ ಪರಂಪರಾಗತ ಬಹುಮುಖೀ ಬಹುಸ್ಥರದ ದೇಶೀ ಸಂಸ್ಕೃತಿಗಳನ್ನು ಮರೆಯುವ ಮುಖೇನ ಅನ್ಯಾಕ್ರಮಣಗಳನ್ನು ಪ್ರತಿರೋಧಿಸುತ್ತಾ ತನ್ನ ನೆಲದಲ್ಲಿ ಗಟ್ಟಿಯಾಗಿ ನೆಲೆಯೂರಿರುವ ತನ್ನ ತಾಯಿ ಬೇರನ್ನೇ ಕಳೆದು ಕೊಂಡಿತು. ಡಿ. ಆರ್. ನಾಗರಾಜ ಗುರುತಿಸುವಂತೆ 'ಭಾರತ ತನ್ನ ಸ್ಥಳೀಯ, ದೇಶೀಯವಾದ ಧಾರ್ಮಿಕ ಪರಂಪರೆಗಳ ಬಹುತ್ವವನ್ನು ಕಳೆದುಕೊಂಡಿತು. ಇದರೊಂದಿಗೆ ತಳುಕು ಹಾಕಿಕೊಂಡಿದ್ದ ಸಾಮರಸ್ಯ, ಸೌಹಾರ್ದ ಮನೋಭಾವ ಕೂಡ ಇಲ್ಲದಾಯಿತು. ಅದರ ಫಲವನ್ನು ಇಂದಿಗೂ ಅನುಭವಿಸುತ್ತಿದ್ದೇವೆ.

ವಸಾಹತುಶಾಹಿ ಭಾರತದ ರಾಜಕಾರಣದಲ್ಲಿ ಇಷ್ಟೆಲ್ಲಾ ಸಂಗತಿಗಳು ಜರುಗುತ್ತಿದ್ದಾಗ ಮೈಸೂರು ಸಂಸ್ಥಾನಕ್ಕೆ ಸೇರಿದ ಮಲೆನಾಡಿನ ತೀರ್ಥಹಳ್ಳಿಯ ಒಂದು ಕುಗ್ರಾಮವಾದ ಕುಪ್ಪಳಿಯಲ್ಲಿ ಪುಟ್ಟಪ್ಪನವರು ತಮ್ಮ 'ಕೊಳಲು' ಕವನ ಸಂಕಲನವನ್ನು ಹೊರತಂದರು. 'ಕಾಡಿನ ಕೊಳಲಿದು ನಾಡಿನ ಜನರೊಲಿದಾಲಿಪುದು' ಎನ್ನುವ ಮೂಲಕ ಸಾಹಿತ್ಯವೆಂಬುದು ಸಮಾಜದ ಮೇಲ್ಜಾತಿ / ಮೇಲ್ವರ್ಗದವರಿಗಷ್ಟೇ ಸೀಮಿತವಾಗಿದ್ದಂತಹ ಕಾಲದಲ್ಲಿ ಶೂದ್ರ ಕುವೆಂಪು ತಮ್ಮ 'ಕೊಳಲ'ನ್ನು ನುಡಿಸಿದುದು ಸಾಮಾನ್ಯ ಸಂಗತಿಯಾಗಿರಲಿಲ್ಲ. ಚಾರಿತ್ರಿಕವಾಗಿ ಮಹತ್ವದ್ದಾಗಿತ್ತು.

ಶೂದ್ರ ಪುಟ್ಟಪ್ಪನವರ ಸೃಜನಶೀಲತೆ ತತ್ಕಾಲೀನ ಕೆಲವು ಸವಾಲುಗಳಿಗೆ ಒಪ್ಪಿಕೊಳ್ಳಲೇಬೇಕಿತ್ತು. ಮುಖ್ಯವಾಗಿ ಅಕ್ಷರವಂಚಿತ ಶೂದ್ರ ಸಮುದಾಯದ ಪ್ರತಿನಿಧಿಯಾಗಬೇಕಿತ್ತು. ಮತ್ತು ಅವರ ಮೇಲೆ 'ವೈದಿಕ ಪ್ರರೋಹಿತಶಾಹಿ' ಮಾಡುತ್ತಿದ್ದ ಶೋಷಣೆಯನ್ನು ಪ್ರತಿಭಟಿಸಿ, ಅವರನ್ನು ವೈಚಾರಿಕವಾಗಿ ಜಾಗೃತಗೊಳಿಸ ಬೇಕಿತ್ತು. ಅಂದರೆ 'ದೇಶಿ–ಯಜಮಾನಿಕೆ'ಯಿಂದ ಶೂದ್ರರನ್ನು ತನ್ಮುಖೇನ ತಮ್ಮನ್ನು ಬಿಡುಗಡೆಗೊಳಿಸಿಕೊಳ್ಳಬೇಕಿದ್ದಿತು. ಆ ಕಾರಣದಿಂದಲೇ ಪರಂಪರೆಗೆ ವಿರುದ್ಧವಾಗಿ ಸಾಮಾನ್ಯರಲ್ಲೂ ಸಾಮಾನ್ಯರಾದ ಮಾನವರನ್ನು ಕ್ಷುದ್ರಾತಿಕ್ಷುದ್ರ ವಸ್ತುಗಳನ್ನು ತಮ್ಮ ಬರವಣಿಗೆಯ ಆಕರಗಳನ್ನಾಗಿ ಮಾಡಿಕೊಂಡರು. ಕರಿಸಿದ್ಧ, ಕಿಟ್ಟಯ್ಯ, ತೇನೆ ಹಕ್ಕಿ, ಪೊಂಗುಳಿ, ನಾಯಿಗುತ್ತಿ, ಗೊಬ್ಬರ, ಹೀರೆಹೂ ಮೊದಲಾದವುಗಳು ಸಾಮಾನ್ಯತೆಯ ರೂಪಕಗಳಾಗಿ ಬಳಕೆಗೊಂಡವು. ಈ ಕಾರಣಕ್ಕಾಗಿಯೇ ಅವರ ಸೃಜನಶೀಲತೆಯ ಮುಂದಿದ್ದ ಮತ್ತೊಂದು ತುರ್ತೆಂದರೆ ಆಗಲೇ ಬಿರುಸಾಗಿ ನಡೆಯುತ್ತಿದ್ದಂತಹ ಸ್ವಾತಂತ್ರ್ಯ ಚಳವಳಿಗೆ ಸ್ಪಂದಿಸುವ ಮುಖೇನ ವಿದೇಶಿ ಯಜಮಾನಿಕೆಯ ವಿರುದ್ಧ ಪ್ರತಿಭಟನೆಯನ್ನು ದಾಖಲಿಸುವುದು. ಭಾರತ ಜನನಿಗೆ, ಭಾರತಮಾತೆ, ಭಾರತ ತಪಸ್ವಿನಿ ಮುಂತಾದ ರಾಷ್ಟ್ರೀಯತೆಯ / ಭಾರತದ ಬಗೆಗಿನ ಅವರ ಅಂದಿನ ನಿಲುವುಗಳನ್ನು ಲಕ್ಷಿಸಬಹುದು.

ವಿಚಿತ್ರದ ಸಂಗತಿಯೆಂದರೆ ಕುವೆಂಪು ಅವರು ತಮ್ಮ ಆರಂಭಿಕ ಕವನಗಳನ್ನು ಬರೆದದ್ದು ಕನ್ನಡದಲ್ಲಲ್ಲ. ಬದಲಾಗಿ ಬ್ರಿಟಿಷ್ ಭಾಷೆಯಾದ ಇಂಗ್ಲಿಷ್‌ನಲ್ಲಿ. ಅವರೇ ಇದರ ಬಗೆಗೆ ಹೇಳಿ ಕೊಂಡಿದ್ದಾರೆ. "ಭಾಷೆಯಲ್ಲಿ ಭಾವತೀವ್ರತೆಯನ್ನು ಅಭಿವ್ಯಕ್ತಿಗೊಳಿಸುವಲ್ಲಿ ಇಂಗ್ಲಿಷ್ ಭಾಷೆಗಿರುವ ಶಕ್ತಿ ಕನ್ನಡಕ್ಕೆ ಬರುವುದಿಲ್ಲ" ಎಂಬುದು ಅವರು ಇದಕ್ಕೆ ನೀಡುವ ಕಾರಣ. ಈ ಹಿನ್ನೆಲೆಯಲ್ಲಿ ವಸಾಹತ್ತೋತ್ತರ ಚಿಂತಕರಾದ ಶ್ರೀ ಆಶೀಶ್‌ನಂದಿಯವರ ಮಾತನ್ನು ಇಲ್ಲಿ ಗಮನಿಸಬಹುದು : ಆಳುವವರು ಮತ್ತು ಅಧೀನರಾಗಿರುವವರು ಇಬ್ಬರೂ ಒಪ್ಪುವಂತಹ ಕೆಲವು ಸಾಂಸ್ಕೃತಿಕ ಸಂಹಿತೆಗಳನ್ನು ವಸಾಹತುಶಾಹಿ ಹುಟ್ಟು ಹಾಕುತ್ತದೆ (ಪು. 74. ವಾಚಿ) ಎಂದು ಅವರು ಹೇಳುತ್ತಾರೆ.

ಅಂದರೆ ಬ್ರಿಟಿಷ್ ವಸಾಹತುಶಾಹಿ ಭಾರತೀಯ ಸುಶಿಕ್ಷಿತರಲ್ಲಿ ಇಂಗ್ಲಿಷ್ ಭಾಷೆಯ ಬಗೆಗೆ ಮೇಲರಿಮೆಯನ್ನೂ ದೇಶಭಾಷೆಯ ಬಗೆಗೆ ಕೀಳರಿಮೆಯನ್ನೂ ಪರಸ್ಪರ ಸಮ್ಮತವಾಗಿಯೇ ಮೂಡಿಸುತ್ತದೆ. ಅದರಿಂದಾಗಿಯೇ ಕುವೆಂಪು ಅವರು ಮೊದಲು ಇಂಗ್ಲಿಷ್‌ನಲ್ಲಿ ಕಾವ್ಯ ರಚಿಸುವ ಹುಮ್ಮಸ್ಸನ್ನು ಕಾಣುತ್ತೇವೆ. ಆದರೆ ಅನಂತರ ಅವರು ತಮ್ಮ ಸೃಜನ ಕರ್ಮವನ್ನು ಕನ್ನಡಕ್ಕೆ ತಿರುಗಿಸಿದುದು ಮತ್ತು ಅದಕ್ಕೆ ಕಾರಣನಾದವನು ಜೇಮ್ಸ್ ಕಸಿನ್ಸ್ ಎಂಬ ಪಾಶ್ಚಾತ್ಯ ಐರಿಷ್ ವ್ಯಕ್ತಿಯೆಂಬುದು ಚಾರಿತ್ರಿಕ ಸಂಗತಿಯಾಗಿದೆ.

ಪ್ರಾರಂಭದಲ್ಲಿ ಕುವೆಂಪು ಕನ್ನಡದಲ್ಲಿ ಕಾವ್ಯ ರಚನೆಯ ಬಗೆಗೆ ಅನೇಕ ಪ್ರಯೋಗಗಳನ್ನು ಮಾಡಿದ್ದರು. ಅವರ ಆರಂಭಿಕ ಕವನ ರಚನಾ ಸಂದರ್ಭವನ್ನು ಕುರಿತ ಮತ್ತು ಅಂದು ಕನ್ನಡದಲ್ಲಿ ಬರೆಯುವವರಲ್ಲಿ ಸಾಮಾನ್ಯವಾಗಿ ಪ್ರಚಲಿತವಿದ್ದ ಮನೋಧರ್ಮವನ್ನು ಕುವೆಂಪು 'ಓ ನನ್ನ ಕನ್ನಡವೆ' ಕವನದಲ್ಲಿ ಕಂಡರಿಸಿದ್ದಾರೆ.

"ಕನ್ನಡದ ಕಬ್ಬದಲಿ ರಸವುಕ್ಕಲಿಲ್ಲ, ಕನ್ನಡದ ಕಬ್ಬಿಗರು ಬರಿಯರೆಗಳಂತೆ, ಹೆರರ ಕೊಳಲಿನ ದನಿಯ ಬೀರುತಿಹರಂತೆ, ಕನ್ನಡಕೆ ಕೊರಳಿಲ್ಲ, ಹುರುಳು ತಿರುಳಿಲ್ಲ.... ಓ ನನ್ನ ಕನ್ನಡವೆ" ಇಲ್ಲಿ ಹೆರರ ಕೊಳಲಿನ ಎದುರು ಕನ್ನಡದ ಕೊರಳಿಲ್ಲ' ಎನ್ನುವಲ್ಲಿ ಸ್ಪಷ್ಟವಾಗಿ ಇಂಗ್ಲಿಷಿನ ಎದುರು ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ ಎದುರಾದಾಗ ಅನುಭವಿಸಿದ ತಲ್ಲಣಗಳನ್ನು ಕುವೆಂಪು ದಾಖಲಿಸಿದ್ದಾರೆ. ಜೊತೆಗೆ ನನ್ನಿಯಿಹುದಿಲ್ಲ ಎಲ್ಲವೂ ಸುಳ್ಳಲ್ಲ' ಎನ್ನುವ ವಾಸ್ತವತೆಯನ್ನು ಒಪ್ಪುತ್ತಲೇ ಅದನ್ನು ಪಂಥಾಹ್ವಾನವಾಗಿ ಸ್ವೀಕರಿಸಿ ಎದುರಿಸುವ ಛಲ ತೋರುತ್ತಾರೆ. 'ಪಂಪ ರನ್ನರ ಹೆತ್ತ ನುಡಿಗೆ ಕುಂದೇನು? ಕವಿಚಕ್ರವರ್ತಿಗಳು ಬರುವರಿನ್ನೊಮ್ಮೆ ಓ ನನ್ನ ಕನ್ನಡವೆ' ಎಂಬ ಪಂಕ್ತಿಗಳು ಇದನ್ನು ಬೆಂಬಲಿಸುತ್ತವೆ.

ಕನ್ನಡವನ್ನು ಕಟ್ಟುವ ಕೆಲಸ ಕುವೆಂಪು ಸೇರಿದಂತೆ ಅಂದಿನ ನವೋದಯದ ಲೇಖಕರ ಮೇಲೆ ಬಿತ್ತು. ಬಿ. ಎಂ. ಶ್ರೀ ಅಂತಹವರು ತಮ್ಮ ಪ್ರಚಾರ ಭಾಷಣಗಳ ಮೂಲಕ ಕನ್ನಡವನ್ನು ಕಟ್ಟಿದರೆ, ಕುವೆಂಪು ಅವರಂಥ ಸೃಜನಶೀಲ ಬರಹಗಾರರು ತಮ್ಮ ಬರವಣಿಗೆಯ ಮುಖೇನವೇ ಕನ್ನಡವನ್ನು ಕಟ್ಟುವ ಕೆಲಸದಲ್ಲಿ ತೊಡಗಿದರು. ಕನ್ನಡವನ್ನು ಕಟ್ಟುವ ಈ ಕರ್ಮ ದ್ವಿವಿಧವಾಗಿತ್ತು. ಮೊದಲನೆಯದಾಗಿ ಪರಂಪರಾಗತವಾಗಿ ಬಂದ ಕಂದ, ವೃತ್ತ, ಷಟ್ಪದಿ ಮೊದಲಾದ ಸಾಂಪ್ರದಾಯಿಕ ಛಂದೋ ಬಂಧಗಳುಳ್ಳ ಸಾಹಿತ್ಯ ರೂಪಗಳನ್ನು ಬಿಟ್ಟು ಹೊಸಗನ್ನಡದ 'ಹೊಸ ಛಂದಸ್ಸಿನಲ್ಲಿ' ಪಾಶ್ಚಾತ್ಯ ಸಾಹಿತ್ಯ ಪ್ರಕಾರಗಳ ಪ್ರೇರಣೆ ಪಡೆದು ಬರೆಯಲಾರಂಭಿಸಿದರು. ಇದು ಒಂದು ಬಗೆ. ಮತ್ತೊಂದು, ಒಡೆತನ ಮತ್ತು ಅಧೀನತೆ ಈ ಸಂಬಂಧಗಳಿಂದ ರೂಪುಗೊಂಡ ಇಂಗ್ಲಿಷ್–ಕನ್ನಡ ಶ್ರೇಣೀಕರಣದಲ್ಲಿ ಆಯ್ಕೆಯ ಸಂದರ್ಭದಲ್ಲಿ ಸಾಮಾಜಿಕ ಮತ್ತು ಆರ್ಥಿಕವಾಗಿ ಲಾಭದಾಯಕವಾಗಿದ್ದ ಇಂಗ್ಲಿಷನ್ನು ಸಮಾಜದ ಮೇಲ್‌ರಚನೆಯಿಂದ ಹೊರದಬ್ಬಿ ಅಲ್ಲಿ ಕನ್ನಡವನ್ನು ಪ್ರತಿಷ್ಠಾಪಿಸಬೇಕಿತ್ತು. ಈ ಕೆಲಸ ಮಹತ್ವದಾಗಿದ್ದು, ಬ್ರಿಟಿಷ್ ವಸಾಹತುಶಾಹಿಯ ಭಾಷೆಗೆ ಅದರ ಸಂಸ್ಕೃತಿಗೆ ಮುಖಾಮುಖಿಯಾಗಿ ನಿಲ್ಲುವ 'ಪ್ರತಿ ಯಜಮಾನಿಕೆ'ಯ ಸ್ವರೂಪದ್ದಾಗಿದ್ದಿತು. ಇದು ಸುಲಭವಾದದ್ದೇನಾಗಿರಲಿಲ್ಲ, ಆದರೂ ಸಹ ಸಾಯುತಿದೆ ನಿಮ್ಮ ನುಡಿ, ಓ ಕನ್ನಡದ ಕಂದರಿರ, ಹೊಸ ನುಡಿಯ ಹೊರೆಯಿಂದ ಕುಡಿದು ಕುಗ್ಗಿ; ರಾಜನುಡಿಯೆಂದೊಂದು, ರಾಷ್ಟ್ರ ನುಡಿಯೆಂದೊಂದು, ದೇವನುಡಿಯೆಂದೊಂದು, ಹತ್ತಿ ಜಗ್ಗಿ, ನಿರಿ ನಿಟಲುನಿಟಿಲೆಂದು ಮುದಿ ಮೂಳೆ ಮುರಿಯತಿದೆ, ಕನ್ನಡಮ್ಮನ ಬೆನ್ನು ಬಳುಕಿ ಬಗ್ಗಿ, ಕೂಗಿಕೊಳ್ಳಲು ಕೂಡ ಒಲವಿಲ್ಲ. ಮಕ್ಕಳೆ, ಬಾಯ್ಮುಚ್ಚಿ ಹಿಡಿದಿಹರು ಕೆಲರು ನುಗ್ಗಿ !–ಎಂದು ಸಾತ್ವಿಕ ಮರುಕದಿಂದ ಕನ್ನಡಿಗರನ್ನು ಎಚ್ಚರಿಸಲು ಪ್ರಯತ್ನಿಸುತ್ತಾರೆ. 'ಕನ್ನಡಮ್ಮ'ನ ಬೆನ್ನು ರಾಜನುಡಿ ಇಂಗ್ಲಿಷ್, ರಾಷ್ಟ್ರ ನುಡಿಯೆಂದು ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಪ್ರಚುರಪಡಿಸಲ್ಪಡುತ್ತಿದ್ದ ಹಿಂದಿ ಹಾಗೂ ದೇವನುಡಿ ಸಂಸ್ಕೃತ–ಈ ಭಾಷೆಗಳಿಂದಾಗಿ 'ನಿರಿನಿಟಲು ನಿಟಿಲೆಂದು ಮುರಿಯುತ್ತಿದೆ' ಎಂಬ ರೂಪಕದಲ್ಲಿ ಪುಟ್ಟಪ್ಪನವರು ತತ್ಕಾಲೀನ

ಸ್ಥಿತಿಗೆ ಕನ್ನಡಿ ಹಿಡಿಯುತ್ತಾರೆ. ಆದರೆ ಕನ್ನಡಮ್ಮನ ಇಂತಹ ಸ್ಥಿತಿಗೆ ಕಾರಣರಾದವರು ಯಾರು, ಸ್ವತಃ ತನ್ನ ಮಕ್ಕಳೆ. ಲೌಕಿಕ ಹಿತಾಸಕ್ತಿಗಾಗಿ ಸ್ವತಃ ಮಕ್ಕಳೇ ತನ್ನ ಕೈಬಿಟ್ಟು ಇಂಗ್ಲಿಷನ್ನು ಹಿಡಿದಿದ್ದಾರೆ. ಜೊತೆಗೆ ದೇಶೀಯ 'ವೈದಿಕ ಯಜಮಾನಿಕೆ'ಯ ಭಾಷೆ ಸಂಸ್ಕೃತ ಆಗಲೇ ಮೃತಪ್ರಾಯವಾಗಿತ್ತು. ಅದಕ್ಕೆ ಹತ್ತಿರದ ಭಾಷೆ, ಹಿಂದಿ, ಜೊತೆಗೆ ಉತ್ತರ ಭಾರತದ ಪ್ರಾದೇಶಿಕ ರಾಜಕಾರಣದ ಹಿತಾಸಕ್ತಿಯ ಹುನ್ನಾರವೂ ಈ ಭಾಷೆಯ ಹಿನ್ನೆಲೆಗಿತ್ತು. ಹೀಗೆ ವರ್ತಮಾನದ ಸ್ಥಿತಿಯನ್ನು ಕಂಡರಿಸುತ್ತಲೇ ಕುವೆಂಪು ಅದನ್ನು ವಿರೋಧಿಸುತ್ತಿದ್ದಾರೆ.

ಇಲ್ಲಿ ಸೂಕ್ಷ್ಮವಾಗಿ ಗಮನಿಸಿದರೆ ಕುವೆಂಪು ಕನ್ನಡವನ್ನು ಹೆಣ್ಣಿಗೆ ಸಮೀಕರಿಸಿ 'ಕನ್ನಡಮ್ಮ' ಎಂಬ ಸ್ತ್ರೀ ವಾಚಕ ರೂಪದಲ್ಲಿ ಬಳಸಿದ್ದಾರೆ. ಇದೇ ಸಂದರ್ಭದಲ್ಲಿ ಭಾರತವನ್ನು 'ಭಾರತಾಂಬೆ' ಎಂದು ಕರೆದು ಅದನ್ನೊಂದು 'ಶಕ್ತಿ'ಯ ರೂಪವಾಗಿ ಪ್ರಚುರಪಡಿಸಿದ್ದಾರೆ. ಇದಕ್ಕೆ ಮುಖ್ಯ ಕಾರಣ ಸಾಮಾನ್ಯವಾಗಿ ಆಳುವ ವರ್ಗವು ತನ್ನನ್ನು ತಾನು ಪುರುಷ ಪುರುಷತ್ವದ ಜೊತೆಗೆ ಪ್ರತಿಷ್ಠಾಪಿಸಿಕೊಂಡು, ಅಧೀನ ವರ್ಗವನ್ನು ಸ್ತ್ರೀ/ ಸ್ತ್ರೀತ್ವದ ಜೊತೆ ಸಮೀಕರಿಸುವ ಮುಖೇನ ಹೆಣ್ಣಿಗಿಂತ ಗಂಡು ಹೆಚ್ಚು ಬಲಶಾಲಿ ಎಂಬ 'ಸಾಮಾನ್ಯ ಗ್ರಹಿಕೆ'. ಈ ಮೂಲಕ ಆಳುವ ವರ್ಗ ರೂಪಿಸಿದ ಗ್ರಹಿಕೆಯ ಮುಖೇನ ಬಲಹೀನಗೊಳಿಸುವುದರಲ್ಲಿ ತೊಡಗಿರುತ್ತದೆ ಎಂದು ವಸಾಹತೋತ್ತರ ಚಿಂತಕರು ತಿಳಿಸುತ್ತಾರೆ. ಸ್ತ್ರೀಯನ್ನು ಭಾರತೀಯ ಸಾಂಪ್ರದಾಯಿಕ ಪರಂಪರೆಯ ಹಿನ್ನೆಲೆಯಲ್ಲಿ 'ಅಮ್ಮ'ನ ದರ್ಜೆಗೇರಿಸಿ ಪವಿತ್ರೀಕರಣಗೊಳಿಸುವ' ಮೂಲಕ ಒಡೆತನದ ಯಜಮಾನಿಕೆಯ ವಿರುದ್ಧ ಪ್ರತಿ ಯಜಮಾನಿಕೆಯನ್ನು ರೂಪಿಸುವ ಪ್ರಯತ್ನವನ್ನು ಮಾಡುತ್ತಾರೆ. ಇದೇ ಹಿನ್ನೆಲೆಯ ಮತ್ತೊಂದು ಕವನ 'ಕನ್ನಡಕೆ ಹೋರಾಡು ಕನ್ನಡದ ಕಂದಾ ಕನ್ನಡವ ಕಾಪಾಡು ನನ್ನ ಆನಂದಾ !.... ಹೊರನುಡಿಯು ಹೊರೆಯ, ನಿನ್ನ ನಾಡೊಡೆಯ ನೀನ್, ವೈರಿಯನು ತೊರೆಯೈ ಕನ್ನಡದ ನಾಡಿನಲಿ ಕನ್ನಡವ ಮೆರೆಯೈ ತಾಯ್ಗಾಗಿ ಹೋರಾಡಿ ತಾಯ್ನುಡಿಯ ಪೊರೆಯೈ– 'ಕನ್ನಡಮ್ಮನ ಕಂದ'–ಇಲ್ಲಿ ಕುವೆಂಪು ಅವರು 'ತಾಯಿ'ಯ ರೂಪಕದಲ್ಲಿ ಸ್ಪಷ್ಟವಾಗಿ ಹೊರನುಡಿ / ವೈರಿಯನು ತೊರೆಯುವ ಕರೆ ನೀಡುತ್ತಿದ್ದಾರೆ. ಸ್ವಾತಂತ್ರ್ಯ ಪೂರ್ವದ ಕವಿತೆಯಾದ ಇದರಲ್ಲಿ ಕನ್ನಡ ನಾಡು, ನುಡಿ ಜನವನ್ನು ಸೂಚಿಸುತ್ತಾ 'ಕನ್ನಡನಾಡಿಗೆ ಕನ್ನಡವೇ ಗತಿ, ಅನ್ಯಥಾ ಶರಣಂ ನಾಸ್ತಿ' ಎಂದು ಹೇಳುತ್ತಿದ್ದಾರೆ.

ಇಂಗ್ಲಿಷ್, ಹಿಂದಿ, ಸಂಸ್ಕೃತದ ವಿರುದ್ಧ ಕನ್ನಡದ ದನಿಯೆತ್ತುತ್ತಲೇ ಪುಟ್ಟಪ್ಪನವರು ತಮ್ಮ ಬರಹಗಳಿಗೆ ಶಕ್ತಿಯನ್ನು ನೀಡು ಎಂದು 'ಕನ್ನಡಮ್ಮ'ನನ್ನು ಬೇಡುವ ಪರಿ ಈ ಕವನದಲ್ಲಿ ವರ್ಣಿತವಾಗಿದೆ. ಇದು ಕನ್ನಡವು ತನ್ನ ಅಸ್ತಿತ್ವವನ್ನು ಪಡೆದುಕೊಳ್ಳುತ್ತಿರುವ ಚಾರಿತ್ರಿಕ ಸಂದರ್ಭದಲ್ಲಿ ಬರಹಗಾರರು ಎದುರಿಸಿದ ತಲ್ಲಣಗಳ ದಾಖಲೆಯಾಗಿಯೂ ಮುಖ್ಯವಾದುದಾಗಿದೆ. "ಕಂದ ಕನ್ನಡನಿವನು ಕೈ ಬಿಡದಿರಮ್ಮಾ, ನೊಂದು ಬಂದಿಹನು ಹಾಲೂಡಿ ಪೊರೆಯಮ್ಮ." 'ಅಮ್ಮ'ನನ್ನು ಪ್ರಾರ್ಥಿಸುವ ಈ ಕವನದ ಮುಖೇನವೇ ಕುವೆಂಪು ಅವರ ಕಾವ್ಯ ಪ್ರಯೋಗಗಳ ನಿರಂತರತೆಯನ್ನು ಅವರು ಆರ್ತರಾಗಿ ಪ್ರಾರ್ಥಿಸುವಲ್ಲಿ ಗಮನಿಸಬಹುದು. ಅಂದರೆ ಒಂದೆಡೆ ಹೊರನುಡಿಗಳ 'ಹೊರೆ'ಗಳ ವಿರುದ್ಧ ಕನ್ನಡಪರ 'ನುಡಿ'ಯೆತ್ತುತ್ತಲೇ ಕನ್ನಡದಲ್ಲಿ ತಮ್ಮ ಕೃಷಿಯನ್ನು ಹಸನುಗೊಳಿಸಿಕೊಳ್ಳುವಲ್ಲಿ ಕುವೆಂಪು ಪ್ರಯತ್ನಿಸುತ್ತಿದ್ದರು. ಇದೇ ವೇಳೆ ಸಮಕಾಲೀನವಾಗಿ ಆಗ ಬರುತ್ತಿದ್ದ ಕನ್ನಡ ಸಾಹಿತ್ಯ ಕೂಡ ಗಮನಾರ್ಹವಾದದ್ದರಿಂದ ಅವರಿಗೆ 'ಅಳುಕದೀ ಕನ್ನಡಂ' ಎನಿಸಿರಬೇಕು. ಅದೂ ಅಲ್ಲದೆ ಬಹು ಮುಖ್ಯವಾಗಿ ದೇಶಕ್ಕೆ ಬಂದ ಸ್ವಾತಂತ್ರ್ಯ ಕೂಡ ಕನ್ನಡದ ಬೆಳವಣಿಗೆಗೆ ಹೇತುವಾಗಬಹುದೆಂದು ಅವರ ಆಶಾಭಾವನೆಯೂ ಇದಕ್ಕೆ ಕಾರಣವಿರಬಹುದು.

ಸ್ವಾತಂತ್ರ್ಯಾನಂತರದ ದೇಶಭಾಷೆಗಳ ಏಳಿಗೆಗೆ ಪೂರಕ ಸನ್ನಿವೇಶವೊದಗಬಹುದೆಂಬ ಆಶಾವಾದವೂ ಅಂದಿನ ನಾಯಕರ ನಡವಳಿಕೆಗಳಿಂದ ನಶಿಸತೊಡಗಿತು. ಹಾಗೆ ನೋಡಿದರೆ ಈ ಸ್ಥಿತಿ ಭಾಷೆಯನ್ನಲ್ಲದೆ ಇಡೀ ಸಂಸ್ಕೃತಿಯನ್ನು ಆವರಿಸಿದ್ದುದು ಬೇರೆ ಸಂಗತಿ. ಸುಮಾರು 1962ನೇ ಇಸವಿಯಲ್ಲಿ ಭಾರತದ ಕೆಲವು ರಾಜ್ಯದ ಮುಖ್ಯಮಂತ್ರಿಗಳು ಮೂರನೆಯ ತರಗತಿಯಿಂದಲೇ ಇಂಗ್ಲಿಷನ್ನು ಭಾಷಾ ವಿಷಯವನ್ನಾಗಿ ಪ್ರಾರಂಭಿಸಲು ನಿರ್ಧರಿಸಿದರು. ಮುಗ್ಧ ಮಕ್ಕಳ 'ಭಾವ' ಮೂಲವನ್ನೆ ನಾಶಗೈಯ್ಯುವ ಕಲಿಕೆಯನ್ನು ಯಾಂತ್ರಿಕವಾಗಿಸುವ ಈ ವಾರ್ತೆಯನ್ನು ಕೇಳಿದ ಕುವೆಂಪು ಈದ್ವರಾಗಿ 'ಪಾರುಮಾಡಿಮ್ಮ ನೀ ಇಂಗ್ಲಿಷ್‌ನಿಂದ, ಪೂತನೀಯ ಅಸುವೀಂಟಿ ಕೊಂದ ಗೋವಿಂದ'! ಎಂಬ ಕವನ ರಚಿಸುವ ಮೂಲಕ ಪ್ರತಿಭಟಿಸುತ್ತಾರೆ. ಪ್ರಾಥಮಿಕ ಹಂತದಿಂದಲೇ ಮಕ್ಕಳಿಗೆ ಇಂಗ್ಲಿಷ್ ಭಾಷೆಯನ್ನು ಕಲಿಸುವುದು ಅತ್ಯಂತ ಅಸಾಧುವೆಂದು ಅದು 'ಬರಡು ಪೂತನಿಯ ಹಾಲ್ದೊರಿಕೆ' ಎಂದು ವ್ಯಗ್ರರಾಗಿ ನುಡಿದರು.

ಇಂಗ್ಲಿಷಿನ ಈ ಕಡ್ಡಾಯತನದಿಂದಾಗಿ ಉಳಿದ ವಿಷಯಗಳಲ್ಲಿ ಪ್ರತಿಭಾನ್ವಿತರಾದ ಅನೇಕ ಮಕ್ಕಳು ತಮಗೆ ಈ ವಿಷಯದಲ್ಲಿ ಆಸಕ್ತಿಯಿಲ್ಲದ ಕಾರಣದಿಂದ ಹಿಂದೆ ಬೀಳುವರು ಎಂದು ಸೂಚಿಸುತ್ತಾರೆ. "ಭೂಮಿಯಲ್ಲಿ ಬೇರೂರಿ ಬಾನೆಡೆಗೆ ತಲೆಯೆತ್ತಿ ನಿಲ್ಲುವ ಅಶ್ವತ್ಥ ವೃಕ್ಷವನ್ನು ಕಿತ್ತು ಕಲ್ಲು ಕುಂಡದಲ್ಲಿ ಬೆಳೆಸಿದರೆ ಹೇಗೋ, ಹಾಗೆ ಒತ್ತಾಯದ ಭಾಷಾ ಕಲಿಕೆಯಿಂದ ಮಕ್ಕಳ ಶಕ್ತಿ–ಬುದ್ಧಿ–ಪ್ರತಿಭೆಗಳು ಕುಬ್ಜವಾಗುತ್ತವೆ" ಎಂದು ಕುವೆಂಪು ಪ್ರತಿಪಾದಿಸುತ್ತಾರೆ. ಅದಕ್ಕಾಗಿಯೇ "ಬಲಾತ್ಕಾರಕ್ಕಾಗಿ ಮಾತ್ರವೆ ಹೊರತು ಈ ರೋಷ, ಭಾಷೆಗಾಗಿಯೆ–ನಮ್ಮ ದ್ವೇಷವೇನಿಲ್ಲ. ತೆಗೆಯಿರಿ ಬಲಾತ್ಕಾರದಂಶವನು 'ಆರಿಸಲಿ ಸರ್ವರೂ ಇಂಗ್ಲಿಷನೆ. ಚಿಂತೆ ಇನಿತಿಲ್ಲ. ಸಾಕು ಈ ಬಲಾತ್ಕಾರ' ಎಂದು ಘೋಷಿಸಿದರು; ಇಂಗ್ಲಿಷ್ ಭಾಷಾ ಬಲಾತ್ಕಾರದ ಇನ್ನೊಂದು ಒಳ ಹುನ್ನಾರವನ್ನು ಪುಟ್ಟಪ್ಪನವರು ಗಮನಿಸಿದ್ದರು. ಅದು ವರ್ತಮಾನಕ್ಕೂ ಕೂಡ ಸಂಗತವಾಗುವ ಸಂಗತಿಯೆ. ಬ್ರಿಟಿಷ್ ವಸಾಹತುಶಾಹಿಯ ಕಾಲದಿಂದಲೂ ಕೂಡ ಅವರ ಭಾಷೆ / ಸಂಸ್ಕೃತಿಯನ್ನು ಕಲಿಯುವ ಮೂಲಕ ಅವರ ಯಜಮಾನ್ಯಕ್ಕೆ ಬೆಂಬಲ ನೀಡುವ, ಆ ಮುಖೇನ ಪ್ರಭುತ್ವದ ಒಂದು ಭಾಗವಾಗಿ ಬೆಳೆದ ಮೇಲ್ಜಾತಿಯ/ಮೇಲ್ವರ್ಗದ ಅಧಿಕಾರಶಾಹಿ ವರ್ಗ ಸ್ವಾತಂತ್ರ್ಯಾನಂತರವೂ ತನ್ನ ಪರಂಪರಾಗತ ಅಧಿಕಾರವನ್ನು ಉಳಿಸಿಕೊಳ್ಳಲು ಹಾಗೂ ತನ್ನ ಸ್ಥಾನಕ್ಕೆ ವರ್ತಮಾನದಲ್ಲಿ ಪೈಪೋಟಿ ನೀಡುವ ಶೂದ್ರ ಹಾಗೂ ದಲಿತರನ್ನು ತಡೆಯಲು, ಅವರನ್ನು ಪ್ರಭುತ್ವದ ಅಧಿಕಾರೀ ವ್ಯವಸ್ಥೆಯಿಂದ ದೂರವಿಡಲು ಈ ಕಡ್ಡಾಯದ ಇಂಗ್ಲಿಷ್ ಭಾಷಾ ವಿಷಯದ ಬೇಲಿಯನ್ನು ನಿರ್ಮಿಸಿದ್ದಾರೆ ಎಂದು ಕುವೆಂಪು ನಂಬುತ್ತಾರೆ. ಈ ಕಾರಣವಾಗಿಯೇ

"ತಮ್ಮವರು ಎಂತಿದ್ದರೂ ನುಸುಳಿ ಬರುವರು ಎಂಬ
ಕೆಚ್ಚಿನಲಿ, ಇಂಗ್ಲಿಷಿನ ಉಕ್ಕಿನ ಬಲೆಯನಿಕ್ಕಿ
ಜಾತಿಯಲಿ ಹಣದಲ್ಲಿ ಅಂತೆ ಅಧಿಕಾರದಲಿ
ಮೇಲೆ ಕುಳಿತವರೆಲ್ಲ ಮೆರೆಯುತಿರುವರು ಸೊಕ್ಕಿ"
ಹೆಣಭಾರ ! ಹೆಣಭಾರ ! ಸಾಕೀ ಬಲಾತ್ಕಾರ;
ಸಾಕು ನಿಲ್ಲಿಸಿ, ನಿಮಗೆ ಬೇಕಾದರುದ್ದಾರ....ಸಾಕು ಈ ಬಲಾತ್ಕಾರ

ಎಂದು ಪ್ರತಿಕ್ರಿಯಿಸುತ್ತಾರೆ. ಒಟ್ಟಾರೆ ಇಂಗ್ಲಿಷ್ ಭಾಷೆಯ ವಿಷಯದಲ್ಲಿ ಪುಟ್ಟಪ್ಪನವರ ನಿಲುವು ಅದು ಎಷ್ಟೇ ಪ್ರಗತಿಪೂರಕವಾಗಿದ್ದರೂ, ಅದು ಶೂದ್ರಾತಿಶೂದ್ರರ ಬಿಡುಗಡೆಗೆ ಕಾರಣವಾಗಿದೆ ಎಂಬ ನಿಲುವು ತಾಳುತ್ತಾರೆ. ಕಲಿಯುವ ವ್ಯಕ್ತಿಯ ಇಚ್ಛೆಗೆ ಅನುಗುಣವಾಗಿ ಕಲಿಸಬೇಕೆ ಹೊರತಾಗಿ ಸರ್ವರ ಮೇಲೂ ಬಲಾತ್ಕಾರದ ಚಪ್ಪಡಿಯನ್ನೇರುವುದನ್ನು ನಿರ್ದಾಕ್ಷಿಣ್ಯವಾಗಿ ವಿರೋಧಿಸುತ್ತಾರೆ.

'ಕುರುವಿನ ಮೇಲೆ ಬೊಕ್ಕೆ'ಯೆಂಬಂತೆ ಸ್ವಾತಂತ್ರ್ಯ ನಂತರದ ಕೇಂದ್ರ ಸರ್ಕಾರ ಹಿಂದಿಯನ್ನು ರಾಷ್ಟ್ರಭಾಷೆಯೆಂದು ಅದನ್ನು ಕಡ್ಡಾಯ ಅಧ್ಯಯನದ ವಿಷಯವನ್ನಾಗಿಸಿತು. ಜೊತೆಗೆ ಕೇಂದ್ರ ಸರ್ಕಾರದ ವ್ಯವಹಾರಗಳಲ್ಲಿ 'ತ್ರಿಭಾಷಾ ಸೂತ್ರ' ಅಂದರೆ. 'ಸ್ಥಳೀಯ ದೇಶಭಾಷೆ' (ಪ್ರಾದೇಶಿಕ ಭಾಷೆ) ಇಂಗ್ಲಿಷ್ ಹಾಗೂ ಹಿಂದಿ ಈ ಮೂರೂ ಭಾಷೆಗಳನ್ನು ಒಳಗೊಂಡಂತೆ ಬಳಸಬೇಕೆಂದು ಆದೇಶಿಸಿತು. ಸರ್ಕಾರದ ಈ ತ್ರಿಭಾಷಾ ಸೂತ್ರದಿಂದಾಗಿ ಶಾಲೆಯಲ್ಲಿ ಮಕ್ಕಳು ಕೂಡ ಮೂರು ಭಾಷೆಗಳಲ್ಲಿ ಕಲಿಯಬೇಕಾಗಿ ಬಂತು. ಕುವೆಂಪು ಇದನ್ನು ತೀವ್ರವಾಗಿ ಪ್ರತಿಭಟಿಸಿದರು.

"ಭಾಷಾ ತ್ರಿಶೂಲವೀ ತ್ರಿಭಾಷಾ ಸೂತ್ರ
ಬಾಲಕರ ರಕ್ಷಿಸೈ ಹೇ ತ್ರಿಟೀತ್ರ
ಚೂರು ತಿಂಡಿಗೆ ಸಿಕ್ಕಿಸಿಹರೊ ಈ ಮೂರು ಗಾಳ;
ನುಂಗದಿದ್ದರೆ ಹಸಿವೆ; ನುಂಗಿದರೆ ಪ್ರಾಣ ಶೂಲ !
ಬಲಾತ್ಕಾರದ ಭಾಷಾ ತ್ರಿಶೂಲ

ಎಂದು ಹಳ ಹಳಸಿದರು. ಈ ಭಾಷಾ 'ತ್ರಿಶೂಲ'ದ ಸಮಸ್ಯೆಯ ಬಗೆಗೆ ಆಳವಾಗಿ ಚಿಂತಿಸಿ ಕೊನೆಗೆ ಒಂದು ನಿಲುವಿಗೆ ಬಂದರು. ಆಯಾ ಪ್ರಾಂತ್ಯಗಳಲ್ಲಿ ಆಯಾ ಪ್ರಾಂತ್ಯ ಭಾಷೆಗೆ ಪ್ರಥಮ ಆದ್ಯತೆ. ಅಖಿಲ ಭಾರತೀಯ ಅಥವಾ ಅಂತರರಾಷ್ಟ್ರೀಯ ಸಂವಹನ ಭಾಷೆಗೆ ದ್ವಿತೀಯ ಸ್ಥಾನ ಕೊಡ ಬೇಕೆಂಬುದು ಕುವೆಂಪು ನಿಲುವು. "ಆಯಾ ಪ್ರಾಂತ್ಯಗಳಲ್ಲಿ ಆಯಾ ದೇಶಭಾಷೆಗಳೇ ಆಡಳಿತ ಭಾಷೆಗಳಾಗಬೇಕು. ಅಲ್ಲಿಯ ಶಿಕ್ಷಣವೆಲ್ಲ ಎಲ್ಲಾ ಮಟ್ಟಗಳಲ್ಲಿಯೂ, ದೇಶ ಭಾಷಾ ಮಾಧ್ಯಮದಲ್ಲಿಯೇ ಸಾಗಬೇಕು (ಪು. 711, ಸಮಗ್ರ ಗದ್ಯ ಸಂ 1) ಅಂದರೆ ಕರ್ನಾಟಕದಲ್ಲಿ ಕನ್ನಡ ಭಾಷೆಯೇ ಆಡಳಿತ ಭಾಷೆಯಾಗಬೇಕು ಮತ್ತು ಶಿಕ್ಷಣವು ಅದರ ಸರ್ವ ಹಂತಗಳಲ್ಲಿ ಕೂಡ ಕನ್ನಡದಲ್ಲೇ ಇರಬೇಕೆಂದು ಅವರ ಪ್ರತಿಪಾದನೆಯಾಗಿದ್ದಿತು. 'ಇದು ಎಷ್ಟು ಮುಖ್ಯವಾದ ಸಂಗತಿಯೆಂದರೆ ಕನ್ನಡ ಆಡಳಿತ ಭಾಷೆಯೆಂದು ಬಳಕೆಗೆ ಬಂದೊಡನೆಯೆ ಶಿಕ್ಷಣ ಮಾಧ್ಯಮದ ಸಮಸ್ಯೆಯೂ ಬಗೆಹರಿಯುತ್ತದೆ' ಎಂಬುದು ಅವರ ಅಭಿಪ್ರಾಯ.

ಇನ್ನು 'ಕರ್ಣಾಟಕ ರಾಷ್ಟ್ರ'ವನ್ನು ಕುರಿತಂತೆ ಕುವೆಂಪು ಅವರ ನಿಲುವುಗಳನ್ನು ಗಮನಿಸಬಹುದು. ಕುವೆಂಪುಗೆ ಕರ್ಣಾಟಕ ಕೇವಲ ಭೌಗೋಳಿಕ ಪ್ರದೇಶ ಮಾತ್ರವಾಗಿರಲಿಲ್ಲ.

'ಕಾವೇರಿ ಸಿರಿಯಡಿಯ, ಗೋದಾವರಿಯ ಮುಡಿಯ
ಮೂಡುಮಲೆಯಲೆಡದ ಗಡಿಯ
ಪಡುಗಡಲ ಬಲದ ತಡಿಯ – ಏಕೈಕ ಕರ್ಣಾಟಕ ಪು. 149–2

ಕರ್ಣಾಟಕಕ್ಕೆ ಅನ್ನಮಯ ರೂಪವಾದ ಭೂಪ್ರದೇಶವಿರುವಂತೆಯೆ, ಪ್ರಾಣಮಯ–ಮನೋಮಯ ರೂಪವಾದ ಚಿತ್ ಪ್ರದೇಶವೂ ಇದೆ. ಚಿನ್ಮಯವೂ, ಆಧ್ಯಾತ್ಮಿಕವೂ ಆಗಿರುವ ಆ ಸಂಸ್ಕೃತಿ–ಕೋಶವೇ ಕರ್ಣಾಟಕ ದೇವಿಯ ಸೂಕ್ಷ್ಮ ಶರೀರ (ಪು. 707–1 ಸ. ಗ). ಕುವೆಂಪುವಿಗೆ ಕರ್ಣಾಟಕವನ್ನು ಕುರಿತಾದ ನಿರ್ಜೀವವಲ್ಲದ, ಸಾವಯವವಾದ, ಸಜೀವವೂ, ಮೂರ್ತವೂ ಆದ ಒಂದು ಭಾವರೂಪವನ್ನು, ಭಾವಕೋಶವನ್ನು ಹೊಂದಿದ್ದರು. ನವೋದಯದ ಈ ಅವಧಿಯ ಬಹುತೇಕ ಎಲ್ಲಾ ಬರಹಗಾರರು ಚಿಂತಕರು ರೂಪಿಸಿಕೊಂಡಿದ್ದ ರಾಷ್ಟ್ರೀಯತೆಯ ರೂಪಕವಿದು.

ಸ್ವಾತಂತ್ರ್ಯ ಅನಂತರದ ಭಾಷಾವಾರು ಪ್ರಾತ್ಯಗಳ ರಚನೆಯ ಸಂದರ್ಭದಲ್ಲಿ ಬ್ರಿಟಿಷ್ ಭಾರತದಲ್ಲಿ ಹರಿದು ಹಂಚಾಗಿದ್ದ ಮುಂಬೈ, ಹೈದ್ರಾಬಾದ್, ಮದ್ರಾಸ್ ಮತ್ತು ಮೈಸೂರು ಪ್ರಾಂತ್ಯಗಳ ಕನ್ನಡ ಪ್ರದೇಶಗಳನ್ನು ಒಟ್ಟುಗೂಡಿಸಿ 'ಏಕೈಕ ಕರ್ಣಾಟಕ'ವನ್ನು ರಚಿಸಬೇಕೆಂಬ ಒಲವು ನಾಡಿನ ಜನರದಾಗಿದ್ದಿತು. ಆದರೆ 'ಏಕೀಕೃತ ಕರ್ಣಾಟಕ'ದಲ್ಲಿ ತಮ್ಮ ರಾಜಕೀಯ ಶಕ್ತಿ ಕಳೆಗುಂದುವುದೆಂಬ ಶಂಕೆಯಿಂದ ಕೆಲವು ನಾಯಕರು ಇದನ್ನು ವಿರೋಧಿಸಿದರು. ಆಗ ಕುವೆಂಪು ಇಂತಹ ವಿಚ್ಛಿದ್ರಕಾರಿ ನಿಲುವುಗಳನ್ನು ಉಗ್ರವಾಗಿ ಖಂಡಿಸಿ 'ಅಖಂಡ ಕರ್ಣಾಟಕ' ಎಂಬ ಕವನದ ಮೂಲಕ ತಮ್ಮ ವಿರೋಧವನ್ನು ಸೂಚಿಸುವುದರ ಜೊತೆಗೆಯೇ ಪರೋಕ್ಷವಾಗಿ 'ಕರ್ಣಾಟಕ'ದ ಬಗೆಗಿನ ತಮ್ಮ ನಿಲುವನ್ನು ವ್ಯಕ್ತಪಡಿಸಿದರು.

'ಅಖಂಡ ಕರ್ಣಾಟಕ'

ಅಲ್ತೊ ನಮ್ಮ ನಾಲ್ಕು ದಿನದ ರಾಜಕೀಯ ನಾಟಕ !

ನೃಪತುಂಗನೆ ಚಕ್ರವರ್ತಿ, ಪಂಪನಿಲ್ಲಿ ಮುಖ್ಯಮಂತ್ರಿ, ರನ್ನ, ಜನ್ನ ನಾಗಮರ್ವ, ರಾಘವಾಂಕ, ಹರಿಹರ, ಬಸವೇಶ್ವರ, ನಾರಾಣಪ್ಪ, ಸರ್ವಜ್ಞ, ಷಡಕ್ಷರ ಸರಸ್ವತಿಯೆ ರಚಿಸಿದೊಂದು ನಿತ್ಯ ಸಚಿವ ಮಂಡಲ ತನಗೆ ರುಚಿತ ಕುಂಡಲ' ಇಲ್ಲಿ ಕುವೆಂಪು ಕರ್ಣಾಟಕ ಕುರಿತ ತಮ್ಮದೇ ಆದ ಸಂಸ್ಕೃತಿ ಕರ್ಣಾಟಕದ ಪರಿಕಲ್ಪನೆ ಹೊಂದಿರುವುದರ ಜೊತೆಗೆ 'ಕರ್ನಾಟಕ'ದ ಪರಿಕಲ್ಪನೆ ಪರಂಪರಾಗತವಾದುದು. ಅಖಂಡ ಕರ್ಣಾಟಕದ ಅನಿವಾರ್ಯತೆ, ರಾಜಕೀಯ ನಾಯಕರ ಕಪಟನಾಟಕಗಳ ವಿರುದ್ಧ ಎತ್ತಿರುವ ಪುಟ್ಟಪ್ಪನವರ ಈ ದನಿ, 'ಏಕೀಕೃತ ಕರ್ಣಾಟಕ'ವನ್ನು ಬಯಸುವರೆಲ್ಲರ ಪ್ರತಿನಿಧಿಯಾಗಿದ್ದಿತು.

ಜನತೆಯ ಆಕಾಂಕ್ಷೆ, ಹಾರೈಕೆ, ನಿರೀಕ್ಷೆಗಳ ಫಲವಾಗಿ 1–11–1956ರಂದು ಏಕೈಕ ಕರ್ಣಾಟಕ ಉದಯವಾಯಿತು. ಈ ಸಂದರ್ಭದಲ್ಲಿ ರಚಿಸಿದ 'ಕರ್ಣಾಟಕದ ರಾಜ್ಯೋದಯ' 'ಶ್ರೀಗೀತೆ'ಯಲ್ಲಿ
'ಬಾರಮ್ಮ ದೇವಿ,

ಓ ತಾಯ ಭಾರತಿಯೆ, ನಿನ್ನ ಮಗಳನು ಹರಸು,
ವರುಷ ಒಂಬತ್ತರಜ್ಜುಚೆಯಲಿ ಬಂಧನ ಮುಕ್ತಳಾದಂದು
ನೀ ಕಂಡ ಕನಸು
ಎರಡು ಕೋಟಿಯ ಹೃದಯದಲಿ ಶತಮಾನದಿಂ ಕಂದಿದ ಒಮ್ಮನಸು
ದುರ್ಮುಖಿಯೆ ಸುಕ್ಷಿಮುಖಿ ತಾನಾದ ದೀವಳಿಯ ದಿನದಂದು

ತಾನಾಗಿಹುದು ನನಸು. (ಪು. 146, ಸಂ. 3. ಸ. ರಾ)

ಭಾರತದ ಸ್ವಾತಂತ್ರ್ಯ ಅನಂತರದ ಒಂಭತ್ತು ವರ್ಷಗಳು ಎರಡು ಕೋಟಿ ಕನ್ನಡ ಮನಸುಗಳ ಕನಸು ನನಸಾಗಿದೆ ಎನ್ನುವಲ್ಲಿ ಅವರ ಪ್ರಜಾಸತ್ತಾತ್ಮಕ ನಿಲುವನ್ನು ಲಕ್ಷಿಸತಕ್ಕದ್ದಾಗಿದೆ. ಇಲ್ಲಿ ಕರ್ನಾಟಕವನ್ನು 'ಭಾರತದ ಮಗಳು' ಎಂದು ಸಂಬೋಧಿಸಿರುವುದು, ಭಾರತ ರಾಷ್ಟ್ರದ ಕಲ್ಪನೆಯೊಳಗೆ ಕರ್ನಾಟಕದ ಅವಿಭಾಜ್ಯತೆಯನ್ನು ಪ್ರತಿಪಾದಿಸುತ್ತಲೇ ಅನಿವಾರ್ಯತೆಯನ್ನು ಪ್ರತಿಪಾದಿಸಿದ್ದಾರೆ. ಭಾರತದ ರಾಷ್ಟ್ರೀಯತೆ ಯೊಳಗೆಯೇ 'ಬಹುರಾಷ್ಟ್ರೀಯತೆ'ಯನ್ನು ಪುಟ್ಟಪ್ಪನವರು ಒಪ್ಪುತ್ತಿದ್ದರು. 'ಭಾರತಿ'ಯೊಳಗಡೆಯೆ 'ವಿವಿಧ ಭಾರತಿ'ಯನ್ನು ಕಾಣುವ ಬಹುತ್ವದ ಕಾಣಿಕೆ ಅವರದಾಗಿದ್ದಿತು. ಆದುದರಿಂದಲೇ ಅವರಿಗೆ ಭಾರತ 'ಕರ್ನಾಟಕ ಭಾರತ'ವಾಗಿದ್ದಿತು. ಕುವೆಂಪು ಹೇಳುವ ಹಾಗೆ 'ನಾನು ರಾಜದೃಷ್ಟಿಯಿಂದ ಕರ್ಣಾಟಕದವನು; ಭಾಷಾದೃಷ್ಟಿಯಿಂದ ಕನ್ನಡಿಗನು; ಆದರೆ ಸಂಸ್ಕೃತಿಯ ದೃಷ್ಟಿಯಿಂದ ಮತ್ತು ರಾಷ್ಟ್ರ ದೃಷ್ಟಿಯಿಂದ ಭಾರತೀಯನು' (ಪ್ರ. 70. ಸ. ಗ.) ಎನ್ನುವ ಈ ಮಾತುಗಳು ಕುವೆಂಪು ಅವರಿಗೆ 'ಭಾರತದ' ಬಗೆಗಿನ ನಿಲುವುಗಳನ್ನು ಕಾಣಬಹುದು.

ಭಾರತವನ್ನು ಕುರಿತ ತಮ್ಮ ಕವನಗಳಲ್ಲಿ 'ಪುರುಷತ್ವ'ದ ಜತೆಗೆ ಸಮೀಕರಿಸಿಕೊಂಡಿರುವ ಬ್ರಿಟಿಷ್ ಅಧಿಕಾರಶಾಹಿಗೆ ಎದುರಾಗಿ ಮತ್ತು ವಿರುದ್ಧವಾಗಿ ಅವರು ಸ್ತ್ರೀ/ ಸ್ತ್ರೀತ್ವದ ರೂಪಕಗಳನ್ನು ಬಳಸುತ್ತಾರೆ. ಭಾರತ ರಾಷ್ಟ್ರವನ್ನು ಭಾರತಾಂಬೆ, ಭಾರತ ಜನನಿ ಎಂದು ಸಂಬೋಧಿಸುವ ಮುಖೇನ 'ಪವಿತ್ರಕರಣ' ಗೊಳಿಸುವ ಪ್ರಯತ್ನ ಮಾಡುತ್ತಾರೆ. ಬ್ರಿಟಿಷ್ ಅಧಿಕಾರಶಾಹಿ ಪುರುಷತ್ವದ ಪ್ರತೀಕವನ್ನು 'ಜನನಿ'ಯ ರೂಪಕದ ಮುಖೇನ ಒಡೆಯುವ ಮೂಲಕ ಭಾರತೀಯ ಸಾಂಸ್ಕೃತಿಕ ಯಜಮಾನ್ಯವನ್ನು ಸ್ಥಾಪಿಸುವುದು, ಮತ್ತೊಂದು 'ತಾಯಿ'ಯೆಂಬ ಈ ರೂಪಕ–ಇದು ಅಂದಿನ ರಾಷ್ಟ್ರೀಯ ರೂಪಕವೇ ಆಗಿದ್ದಿತು. ಆದ್ದರಿಂದಲೇ ಅವರು.

'ಭಾರತಾಂಬೆಯೆ, ಜನನಿ ನಿನ್ನೊಳು ಧನ್ಯನಾದೆನು, ದೇವಿಯೆ.

ನಿನ್ನ ಪ್ರೇಮದಿ ಬೆಳೆದು ಜೀವವು ಮಾನ್ಯವಾದುದು ತಾಯಿಯೆ. (ಪು. 105. ಸ. ಕಾ. 1)

ಎಂದು ಸ್ಮರಿಸಿಕೊಳ್ಳುತ್ತಾರೆ. ಇದೇ ಹಿನ್ನೆಲೆಯ ಮತ್ತೊಂದು ಕವನ,

ಭರತಭೂಮಿ ನನ್ನ ತಾಯಿ
ನನ್ನ ಪೊರೆವ ತೊಟ್ಟಿಲು
ಜೀವನವನೆ ದೇವಿಗೆರೆವೆ
ಬಿಡುತೆ.... ಭರತಭೂಮಿ ನನ್ನ ತಾಯಿ ಪು. 378–1 ಸ. ಕಾ

ಹೀಗೆ ವೈಯಕ್ತಿಕವೆನಿಸುವ ಮೂಲಕವೇ ಸಾರ್ವತ್ರಿಕವಾಗಬಲ್ಲ ಇಂತಹ ಕವನಗಳ ಮೂಲಕ ಜನತೆಯಲ್ಲಿ ರಾಷ್ಟ್ರೀಯತೆ / ದೇಶಭಕ್ತಿಯನ್ನು ಮೂಡಿಸುವ ಕೆಲಸ ಮಾಡುತ್ತಾರೆ.

ಆದರೆ ಕುವೆಂಪು ಕೇವಲ ಭಾವನಾತ್ಮಕವಾದ ರಮ್ಯತೆಯ ತಳಹದಿಯಲ್ಲಿ ರಾಷ್ಟ್ರೀಯತೆಯ ಆದರ್ಶವನ್ನು ಸಾಧಿಸುವ ಲೇಖಕರಾಗಿರಲಿಲ್ಲ. ನವೋದಯದ ಇತರ ಲೇಖಕರೆಲ್ಲ ಭಾರತಾಂಬೆಯನ್ನು ಕುರಿತ ಪೂಜನ/ ಭಜನದಲ್ಲಿ ತೊಡಗಿದ್ದಾಗ ಕುವೆಂಪು ಕೂಡ ಇದೇ ಹಾದಿಯಲ್ಲಿ ಬಂದವರೇ ಆದರೂ ಅಲ್ಲೇ ನಿಲ್ಲದೆ ಮುಂದುವರಿದು ಈ ರೀತಿಯಾಗಿ ಹೇಳಿದ್ದಾರೆ–

"ನೂರು ದೇವರನೆಲ್ಲ ನೂಕಾಚೆ ದೂರ
ಭಾರತಾಂಬೆಯ ದೇವಿ ನಮಗಿಂದು ಪೂಜಿಸುವ ಬಾರ !
ಸತ್ತ ಕಲ್ಗಳ ಮುಂದೆ ಅತ್ತು ಕರೆದುದು ಸಾಕು
ಜೀವದಾತೆಯನಿಂದು ಕೂಗಬೇಕು....
ಭಾರತಿಯೆ ನಮಗಿಂದು ಜೀವನದ ದೇವತೆಯು
ವಿಶ್ವರೂಪಿಣಿಯವಳು ವಿಶ್ವಮುಖಿಯೈ ! ....
ನಮ್ಮ ಸ್ವಾತಂತ್ರ್ಯದೊಳೆ ನಮ್ಮಮ್ಮ ಸುಖಿಯೈ !
ಇಂದೊ ನಾಳೆಯೋ ದಾಸನೀಶನಾಗಲೇಬೇಕು.... – 'ಇಂದಿನ ದೇವರು'

ಭಾರತಾಂಬೆಯನ್ನು ಪೂಜಿಸುವ ಜೊತೆಗೆಯೇ 'ಚಳಿಯು ಮಳೆಯಲಿ ನೆನೆವ ತಾಯಿ' 'ಇಂದೊ ನಾಳೆಯೋ ದಾಸನೀಶನಾಗಲೇಬೇಕು' ಎಂದು ಶೂದ್ರ ವರ್ಗದಿಂದ ಬಂದ ಪುಟ್ಟಪ್ಪ ಮಾತ್ರ ರಚಿಸಲು ಸಾಧ್ಯ. 'ನಮ್ಮ ಸ್ವಾತಂತ್ರ್ಯದೊಳೆ ನಮ್ಮಮ್ಮ ಸುಖಿಯೈ' ಎನ್ನುವ ಮೂಲಕ ದೇಶದ ಸ್ವಾತಂತ್ರ್ಯದಿಂದಲೇ (ಎಲ್ಲಾ ಜಾತಿ, ವರ್ಗದ ಜನರ ಬಿಡುಗಡೆ) ಭಾರತಾಂಬೆಯ ಸ್ವಾತಂತ್ರ್ಯ ಸಾಧ್ಯವೆಂಬ ವಾಸ್ತವ ಸತ್ಯವನ್ನು ಚಿತ್ರಿಸುತ್ತಾರೆ. ಬ್ರಾಹ್ಮಣಾದಿಯಾಗಿ ಪಂಚಮನವರೆಗೆ ಯಾವಾಗ ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಪ್ರಜಾಪ್ರಭುತ್ವ ಸಾಧ್ಯವೊ ಆಗಲೆ 'ಭಾರತಾಂಬೆ'ಯ ಸ್ವಾತಂತ್ರ್ಯ ಎಂಬುದು ಪುಟ್ಟಪ್ಪನವರ ನಿಲುವಾಗಿತ್ತು.

ಕುಪಂಪು ಆಶಾವಾದಿಗಳಾಗಿದ್ದರು. ಭಾರತದಲ್ಲಿ ಸು. 300 ವರ್ಷಗಳಷ್ಟು ಸುದೀರ್ಘವಾದ ಬ್ರಿಟಿಷ್ ಆಳ್ವಿಕೆಯ ಇತಿಹಾಸ ಕಣ್ಣೆದುರಿಗಿದ್ದು, ಪರಾಧೀನತೆಯ ಭಾರದಿಂದ ನರಳುತ್ತಿದ್ದರೂ ಕೂಡ, ಭಾರತದ ಸಾಂಸ್ಕೃತಿಕ ಹಿರಿಮೆ, ವರ್ಚಸ್ಸಿನ ಬಗೆಗೆ ಸದಾ ಮೇಲರಿಮೆಯನ್ನು ಹೊಂದಿದ್ದರು. ಒಂದೊಮ್ಮೆ ಈ ಬ್ರಿಟಿಷ್ ಆಳ್ವಿಕೆ ಕೊನೆಗೊಳ್ಳುತ್ತದೆ ಎಂಬ ವಿಶ್ವಾಸ ಅವರದು. ಆಗ

ಭಾರತಾಂಬೆಯ ಜಗದ ಬೆಳಕಾಗುವಳು; ಮತ್ತೊಮ್ಮೆ ಹೆಮ್ಮೆ
ಗೌರವಗಳಿಂದ ಜನಗಣದ ಕಟು ನಿರ್ದಯದ
ಲೋಭಿ ಬುದ್ಧಿಯ ಹೀನ ಕುಟಿಲತೆಯ ನುರೆ ನೀಗಿ
ಮೆರೆವಳು ತಪಸ್ವಿನಿಯೆ ಚಕ್ರವರ್ತಿನಿಯಾಗಿ. – ಭಾರತ ತಪಸ್ವಿನಿ (ಪು. 512–1 ಸ.ಕಾ.)

ತಪಸ್ವಿನಿ ಭಾರತದ ತಪಸ್ಸಿನ ಶಕ್ತಿಯಿಂದಲೇ ಆಕೆ ಮತ್ತೊಮ್ಮೆ ಜಗದ ಬೆಳಕಾಗುವಳೆಂದು ಕುವೆಂಪು ಭಾವಿಸುತ್ತಾರೆ. ಇಲ್ಲಿ ಒಂದು ಪಂಕ್ತಿಯನ್ನು ಸೂಕ್ಷ್ಮವಾಗಿ ಗಮನಿಸಬೇಕು. 'ಮೆರೆವಳು ತಪಸ್ವಿನಿಯ ಚಕ್ರವರ್ತಿನಿಯಾಗಿ' ಎನ್ನುವ ಮೂಲಕ ಮುಂದೆ ಭಾರತ ತನ್ನ ದಾಸತ್ವವನ್ನು ನೀಗಿ 'ಚಕ್ರವರ್ತಿನಿ'ತ್ವವನ್ನು ಮತ್ತೊಮ್ಮೆ ಪಡೆದುಕೊಳ್ಳುತ್ತದೆ ಎಂಬ ಕವಿಯ ಆಶಾಭಾವ ಇಲ್ಲಿ ವ್ಯಕ್ತವಾಗಿದೆ. ಇಲ್ಲಿ 'ಚಕ್ರವರ್ತಿನಿ'ತ್ವಕ್ಕೆ ಕುವೆಂಪು ಕೊಟ್ಟಿರುವ ಸಾಂಸ್ಕೃತಿಕ ಅರ್ಥಪರಿವೇಷವನ್ನು ಹೊರತುಪಡಿಸಿ ಪಠ್ಯವನ್ನು ಗಮನಿಸಿದರೆ, ಕುವೆಂಪು ವಸಾಹತುಶಾಹಿ ಪರಿಭಾಷೆಗಳ ನೆರವಿನೊಂದಿಗೆ ಮಾತನಾಡುತ್ತಿದ್ದಾರೆ ಎಂದೆನಿಸುತ್ತದೆ. ಇಟಲಿಯ ಮಾರ್ಕ್ಸ್‌ವಾದಿ ಚಿಂತಕ 'ಗ್ರಾಮ್ಷಿ' ಒಂದು ಮಾತನ್ನು ಹೇಳುತ್ತಾನೆ : 'ಅಧೀನ / ವಸಾಹತು ರಾಷ್ಟ್ರಗಳು ಯಾವತ್ತೂ ಪ್ರಭುತ್ವ ಬಳಸುವ ಯಜಮಾನಿಕೆಯನ್ನು ರೂಪಿಸುವ ಸಾಧನಗಳನ್ನಾಗಿ ಬಳಸಬಾರದು' ಎಂದು ಹೇಳುತ್ತಾನೆ. ಅದರಿಂದ ಆಗುವ ಅನಾಹುತವೆಂದರೆ ಅದು 'ಪ್ರಭುತ್ವ ಯಜಮಾನ್ಯಕ್ಕೆ' ವಿರುದ್ಧ ಮತ್ತು ಪ್ರತಿಯಾಗಿ 'ಪ್ರತಿ ಯಜಮಾನಿಕೆ'ಯನ್ನು ನಿರೂಪಿಸುತ್ತಲೇ 'ಪ್ರಭುತ್ವ ಯಜಮಾನ್ಯ'ದ ನಿರ್ವಾತದಲ್ಲಿ ಮತ್ತೊಂದು ಯಜಮಾನ್ಯದ ಕಲ್ಪನೆಯನ್ನು ಮಂಡಿಸುತ್ತದೆ. ಪ್ರಸ್ತುತ ಕವನದಲ್ಲಿ ಆಗಿರುವುದೇ ಇದು. ಕುವೆಂಪು 'ತಪಸ್ವಿನಿ' ಭಾರತ ಚಕ್ರವರ್ತಿನಿಯಾಗುವಳೆಂಬ ಅಭಿಲಾಷೆ ಹೊಂದಿರುವುದೇ ವಸಾಹತು ಪ್ರಭುತ್ವ ಪ್ರಣೀತ ವಿಚಾರಧಾರೆಗಳ ಅವಿಮರ್ಶಿತ ಸಮ್ಮತಿಯಿಂದ. ಹಾಗೆ ನೋಡಿದರೆ ರಾಷ್ಟ್ರೀಯತಾ ಆಂದೋಲನದ ಆ ಸಂದರ್ಭದಲ್ಲಿ ಕನ್ನಡ ಹಾಗೂ ಇತರ ದೇಶ ಭಾಷೆಗಳ ಬಹುತೇಕ ಎಲ್ಲಾ ಬರಹಗಾರರು ಚಿಂತಕರು ಭಾರತವನ್ನು ಸಾಂಸ್ಕೃತಿಕವಾಗಿ, ಆಧ್ಯಾತ್ಮಿಕವಾಗಿ 'ಚಕ್ರವರ್ತಿನಿ' ಎಂದು ಒಪ್ಪಿದವರೇ. ಕುವೆಂಪು ಕೂಡ ಇದಕ್ಕೆ ಹೊರತಲ್ಲ. ಮತ್ತು ಅವರ ಪಠ್ಯದ 'ಅರ್ಥ' ಕೂಡ ಈ ಹಿನ್ನೆಲೆಯುಳ್ಳದ್ದೇ ಆಗಿದೆ.

ಒಟ್ಟಾರೆ ಕನ್ನಡ, ಕರ್ನಾಟಕ ಮತ್ತು ಭಾರತ ಕುವೆಂಪು ಅವರಿಗೆ ಒಂದು ಅಖಂಡವಾದ 'ಸಾಂಸ್ಕೃತಿಕ ಗ್ರಹಿಕೆ'ಯ ಐಡಿಯಾಲಜಿಯಾಗಿತ್ತು. ಅವು ತುಂಡಾದ ಭಿನ್ನವಾದ ಘಟಕಗಳಾಗಿರಲಿಲ್ಲ. ಆದ್ದರಿಂದಲೇ ವಸಾಹತು ಭಾರತದ ಅಂದಿನ ಸಂದರ್ಭದಲ್ಲಿ ಅವರು ಕನ್ನಡದ ಬಗೆಗೆ ಕರ್ನಾಟಕದ ಬಗೆಗೆ ಮಾತನಾಡುತ್ತಿದ್ದಾರೆಂದರೆ ಭಾರತ ರಾಷ್ಟ್ರೀಯತೆಯನ್ನು ಕುರಿತಾದ ನಿಲುವುಗಳನ್ನು ಮಂಡಿಸುತ್ತಿದ್ದಾರೆಂದೇ ಅರ್ಥ. ಆದ್ದರಿಂದಲೇ ಅವರು 'ಕರ್ಣಾಟಕ ಮಾತೆಗೆ ಸಲ್ಲುವ ಜಯಕಾರ ಆಕೆ ಭಾರತ ಜನನಿಯ ತನುಜಾತೆಯಾಗಿರುವುದರಿಂದಲೇ. ಅಂಗೋದ್ಭವೆಯಾಗಿ ವಿನಾ ಕರ್ನಾಟಕಕ್ಕೆ ಬೇರೆಯ ಅಸ್ತಿತ್ವವೆಲ್ಲಿ (ಪು. 709. ಸ. ಗ–1) ಎಂದು ಪ್ರಶ್ನಿಸುತ್ತಾರೆ. ಜಯ್ ಭಾರತ ಜನನಿಯ ತನುಜಾತೆ, ಜಯಹೇ ಕರ್ಣಾಟಕ ಮಾತೆ' (ಪ್ರಟ 106–1) ಕವನ ಈ ಹಿನ್ನೆಲೆಯುಳ್ಳದ್ದಾಗಿದೆ. ಅಂದರೆ ಅವರು ಕನ್ನಡ ಕರ್ನಾಟಕಗಳ ಮುಖೇನ ಭಾರತವನ್ನು ಗ್ರಹಿಸಿದ್ದರು. ಇವೆಲ್ಲವನ್ನು ಮೀರಿದ 'ವಿಶ್ವಮಾನವತ್ವ'ವನ್ನು ಪ್ರತಿಪಾದಿಸುತ್ತಾರೆ ಎನ್ನುವುದು ಎಲ್ಲರಿಗೂ ತಿಳಿದಿರುವ ಸಂಗತಿಯೇ ಆಗಿದೆ. ಅವರೇ ಒಂದೆಡೆ ಈ ರೀತಿಯಾಗಿ ಹೇಳಿಕೊಂಡಿದ್ದಾರೆ 'ನಾನು ಕನ್ನಡಿಗ. ನನ್ನ ಸಂಸ್ಕೃತಿ–ಭಾರತೀಯ, ಆದರೆ ನಾನು ವಿಶ್ವಮಾನವ' ಎಂದು. ಹೀಗೆ ಕುವೆಂಪು ಕಾವ್ಯವನ್ನು ಪ್ರಾತಿನಿಧಿಕವಾಗಿ ವಸಾಹತುಶಾಹಿ ಹಿನ್ನೆಲೆಯಲ್ಲಿ ವಿವೇಚಿಸಲಾಗಿದೆ.